# ಗಣೇಶ ಚತುರ್ಥಿ ಆಚರಣೆ ಪರಿಸರ ಸ್ನೇಹಿಯಾಗಿರಲಿ



## ಅನುಸರಣಾ ಮಾರ್ಗ ಸೂಚಿಗಳು

- ಬಣ್ಣರಹಿತ ಅಥವಾ ನೈಸರ್ಗಿಕ ಬಣ್ಣ ಲೇಪಿತ ಮೂರ್ತಿಗಳನ್ನು ಬಳಸಿ.
- ತೈಲ ಬಣ್ಣಗಳು ಜಲಚರಗಳಿಗೆ ಹಾನಿ ಉಂಟು ಮಾಡುವ ಲೋಹಗಳಿಂದ ಕೂಡಿರುತ್ತವೆ.
- ಬಕೆಟ್‌ನಲ್ಲಿ ಅಥವಾ ಸಂಚಾರಿ ವಿಸರ್ಜನ ವಾಹನದಲ್ಲಿ ಅಥವಾ ಕೆರೆಗಳ ನಿಗದಿಪಡಿಸಿದ ಸ್ಥಳದಲ್ಲಿ ಮೂರ್ತಿ ವಿಸರ್ಜಿಸಿ.



- ವಿಸರ್ಜನೆಗೆ ಮೊದಲು ಹೂವು/ ಅಲಂಕಾರಿಕ ಸಾಮಗ್ರಿಗಳನ್ನು ಪ್ರತ್ಯೇಕಿಸಿ, ನಿಗದಿತ ಸ್ಥಳದಲ್ಲಿ ಹಾಕಿ.
- ಆಚರಣೆಗಳು ಮಕ್ಕಳು, ವೃದ್ಧರು ಮತ್ತು ರೋಗಿಗಳಿಗೆ ತೊಂದರೆ ಮಾಡದಿರಲಿ. ರಾತ್ರಿ 10 ರಿಂದ ಬೆಳಿಗ್ಗೆ 6 ಗಂಟೆಯವರೆಗೆ ಧ್ವನಿವರ್ಧಕ ಬಳಸಬೇಡಿ.

*ನಿಸರ್ಗ ಸಂರಕ್ಷಣೆಯೇ ಶ್ರೇಷ್ಠ ರೂಪದ ಆರಾಧನೆ*


ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಕಟಣೆ

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

ಪರಿಸರ ಭವನ, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001.

ಈಮೇಲ್ : kspcb@kar.nic.in ವೆಬ್‌ಸೈಟ್: http://kspcb.kar.nic.in

ದೂರವಾಣಿ: 080-25581383, 25589112, 25586520

# Let's go green on Ganesha Chaturthi



## Green Norms for the Festival

- Use paintless idols or the ones with natural colours.
- Oil paints contain metals harmful to aquatic life.
- Immerse the idols in bucket, mobile immersion vans or designated spots in lakes.



- Before immersion drop flowers / decorative items in the designated container kept at the tank / lake.
- Let no celebration disturb infants, elderly people and patients. Do not play loud speakers from 10.00 p.m. to 6.00 a.m.

*Preservation of Nature is the Greatest form of Worship*

Issued in Public Interest by

**KARNATAKA STATE POLLUTION CONTROL BOARD**

Parisara Bhavan, No.49, Church Street, Bangalore - 560 001.
E-mail: kspcb@kar.nic.in Website: http://kspcb.kar.nic.in
Ph: 080-25581383, 25589112, 25586520

# ನೀರಿನ ಮೂಲಗಳಲ್ಲಿ ಗಣೇಶನ ಮೂರ್ತಿಗಳನ್ನು ವಿಸರ್ಜನೆ ಮಾಡಲು ಮಾರ್ಗದರ್ಶಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಪರಿಸರ ಭವನ, #49, ಚರ್ಚ್ ರಸ್ತೆ, ಬೆಂಗಳೂರು-560001

ರಾಜ್ಯಾದ್ಯಂತ ಪ್ರತಿ ವರ್ಷವು ಗಣೇಶ ಚತುರ್ಥಿ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬದ ಸಮಯದಲ್ಲಿ ಗಣೇಶನ ಮೂರ್ತಿಗಳನ್ನು ಜೇಡಿ ಮಣ್ಣಿನ ಅಥವಾ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ವಿವಿಧ ಆಕಾರಗಳಲ್ಲಿ ಮತ್ತು ವಿವಿಧ ಬಣ್ಣಗಳಲ್ಲಿ ತಯಾರಿಸಿದ ಗಣೇಶ ಮೂರ್ತಿಗಳನ್ನು ಮನೆಗಳಲ್ಲಿ ಪೂಜಿಸುತ್ತಾರೆ.ಹಬ್ಬ ಆದ ಬಳಿಕ ಈ ಗಣೇಶ ಮೂರ್ತಿಗಳನ್ನು ಹತ್ತಿರದ ಕೆರೆ, ಬಾವಿ ಮತ್ತು ನದಿಗಳಲ್ಲಿ ವಿಸರ್ಜಿಸುತ್ತಾರೆ. ಇದರಿಂದಾಗಿ ಜಲ ಮಾಲಿನ್ಯ ತೊಂದರೆಗಳು ಉಂಟಾಗುತ್ತದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪ್ರತಿ ವರ್ಷವೂ ಗಣೇಶ ಹಬ್ಬದ ಸಮಯದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ ಮತ್ತು ವಿವಿಧ ನೀರಿನ ಮೂಲಗಳಿಂದ ಮಾದರಿಗಳನ್ನು ಹಬ್ಬದ ಮುಂಚೆ, ಹಬ್ಬದ ದಿನದಂದು ಮತ್ತು ಹಬ್ಬದ ನಂತರ ವಿಶ್ಲೇಷಣೆಯನ್ನು ಮಾಡುತ್ತದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಒಂದು ಅಧ್ಯಯನದಿಂದ ನೀರಿನ ಗುಣಮಟ್ಟದಲ್ಲಿ conductivity, BOD ಮತ್ತು ಲೋಹದ ಸಾಂದ್ರತೆಯಿಂದ ನೀರಿನ ಗುಣ ಮಟ್ಟವು ಕ್ಷೀಣಿಸುತ್ತದೆ/ಕೆಡುತ್ತದೆ ಎಂದು ತಿಳಿದು ಬಂದಿದೆ. ನೀರಿಗೆ ಜೇಡಿಮಣ್ಣು ಸೇರಿದೊಡನೆ, ಮೂರ್ತಿಗಳ ತಯಾರಿಕೆಯಲ್ಲಿ ಉಪಯೋಗಿಸುವ ವಿಷಪೂರಿತ ರಾಸಾಯನಿಕ ವಸ್ತುಗಳಿಂದ ನೀರಿನಲ್ಲಿ ತೀವ್ರವಾದ ಮಾಲಿನ್ಯ ಉಂಟಾಗಲು ಕಾರಣವಾಗುತ್ತದೆ. ಈ ನಿಟ್ಟಿನಲ್ಲಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ತನ್ನ ಅಧ್ಯಯನ ಹಾಗೂ ಇತರ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ತೆಗೆದುಕೊಂಡ ಕ್ರಮಗಳ ಆಧಾರದಿಂದ ಗಣೇಶ ಮೂರ್ತಿಗಳನ್ನು ವಿವಿಧ ನೀರಿನ ಮೂಲಗಳಲ್ಲಿ ವಿಸರ್ಜನೆ ಮಾಡಲು ಒಂದು ಮಾರ್ಗದರ್ಶಿಯನ್ನು ನೀಡಿರುತ್ತಾರೆ. ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ತನ್ನ 161ನೇ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡ ಮಾರ್ಗದರ್ಶಿಗಳಿಗೆ ಅನುಮೋದನೆ ನೀಡಿದೆ.

<u>ಮಾರ್ಗದರ್ಶಿಗಳು:</u>

1. ಒಂದನೇ ವರ್ಗದ ನಗರಗಳಲ್ಲಿ ನೀರಿನ ಗುಣಮಟ್ಟದ (ಜನಸಂಖ್ಯೆ 1 ಲಕ್ಷಕ್ಕಿಂತ ಹೆಚ್ಚಿರುವ) ವಿಶ್ಲೇಷಣೆಯನ್ನು 3 ಹಂತಗಳಲ್ಲಿ ಭೌತಿಕ ರಾಸಯಾನಿಕ ಮಾನಕಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಬೇಕಾಗಿರುತ್ತದೆ ಅಂದರೆ ಗಣೇಶ ಮೂರ್ತಿಗಳನ್ನು ವಿಸರ್ಜಿಸುವ ಮುಂಚೆ, ವಿಸರ್ಜಿಸುವಾಗ, ವಿಸರ್ಜನೆ ಆದ ಬಳಿಕ ನೀರಿನ ಗುಣಮಟ್ಟದಲ್ಲಿ pH, Dissolved Oxygen, Bio-chemical oxygen demand, chemical Oxygen demand, conductivity, turbidity, total dissolved solids, total solids and metals (cadmium chromium, iron,

nickel, lead, zinc and copper) ಗಳ ಬಗ್ಗೆ ವಿಶ್ಲೇಷಣೆ ಮಾಡಬೇಕಾಗಿರುತ್ತದೆ.

2. ಗಣೇಶ ಮೂರ್ತಿಗಳನ್ನು ಸರ್ಜಿಸುವಾಗ ಮಾಲಿನ್ಯದ ಒತ್ತಡವನ್ನು ಕಡಿಮೆ ಮಾಡಲು ಮತ್ತು ಅಪಾರ ಜನಸಂದಣಿಯನ್ನು ತಡೆಗಟ್ಟಲು ಸ್ಥಳೀಯ ಸಂಸ್ಥೆಗಳು, ಕೆರೆ ಅಭಿವೃದ್ಧಿ ಪ್ರಾಧಿಕಾರವು ಹೆಚ್ಚಿನ ಸಂಖ್ಯೆಯಲ್ಲಿ ಗಣೇಶ ಮೂರ್ತಿಗಳನ್ನು ವಿಸರ್ಜಿಸುವ ಜಾಗವನ್ನು ಗುರುತಿಸ ಬೇಕು. ಇಂತಹ ಗುರುತಿಸಿದ ಸ್ಥಳಗಳ ಬಗ್ಗೆ ಪ್ರಕಟಣೆಯನ್ನು ಮತ್ತು ಹೆಚ್ಚು ಪ್ರಚಾರವನ್ನು ಪ್ರತಿ ವರ್ಷವೂ ಹಬ್ಬದ ಒಂದು ತಿಂಗಳು ಮುಂಚೆ ಮತ್ತು ಹಬ್ಬದ ದಿನಗಳಲ್ಲಿ ಮಾಡಬಹುದಾಗಿದೆ.

3. ಸಾಂಪ್ರದಾಯಿಕವಾಗಿ ಗಣೇಶ ಮೂರ್ತಿಗಳನ್ನು ಜೇಡಿ ಮಣ್ಣಿನಿಂದ ತಯಾರಿಸಲು ಪ್ರೋತ್ಸಾಹಿಸಿ ಹಾಗೂ ಸುಟ್ಟ ಜೇಡಿ ಮಣ್ಣಿನಿಂದ ತಯಾರಿಸುವ ಗಣೇಶ ಮೂರ್ತಿ ಗಳಿಗೆ ಪ್ರೋತ್ಸಾಹಿಸಬಾರದು. ಬಣ್ಣ ಬಳಿದಿರುವ ಮೂರ್ತಿ ಗಳನ್ನು ನಿರ್ದಿಷ್ಟವಾಗಿ ಕಡೆಗಣಿಸಬೇಕು. ಬಣ್ಣ ಬಳಿದ ಗಣೇಶ ಮೂರ್ತಿಗಳನ್ನು ಉಪಯೋಗಿಸಿದರೆ ನೀರಿನಲ್ಲಿ ಕರಗುವ ಬಣ್ಣಗಳು ಮತ್ತು ವಿಷಯುಕ್ತವಲ್ಲದ ನೈಸರ್ಗಿಕ ಬಣ್ಣಗಳನ್ನು ಉಪಯೋಗಿಸುವಂತೆ ಹಾಗೂ ಗಣೇಶ ಮೂರ್ತಿ ತಯಾರಿಕೆಗೆ ವಿಷಯುಕ್ತವಾದ ಮತ್ತು ನೀರಿನಲ್ಲಿ ಕರಗದಿರುವಂತಹ ರಾಸಯಾನಿಕ ಬಣ್ಣಗಳನ್ನು ಗಣೇಶ ಮೂರ್ತಿಗಳಿಗೆ ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಬೇಕು. ಔಷಧ ವಸ್ತುಗಳಲ್ಲಿ ಮತ್ತು ಆಹಾರ ಪದಾರ್ಥಗಳಲ್ಲಿ ಉಪಯೋಗಿಸುವ ನೈಸರ್ಗಿಕ ಬಣ್ಣಗಳನ್ನು ಉಪಯೋಗಿಸಲು ಅನುಮತಿ ನೀಡಲು ಕ್ರಮಜರುಗಿಸಬೇಕು.

4. ಪೊಲೀಸರು, ಸರ್ಕಾರೇತರ ಸಂಘಗಳು ಮತ್ತು ಧಾರ್ಮಿಕ ಗುಂಪುಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಸಮನ್ವಯ ಸಮಿತಿಯನ್ನು ರಚಿಸಿ ಜಲ ಸಂಗ್ರಹದಲ್ಲಿ ಗಣೇಶ ಮೂರ್ತಿಗಳನ್ನು ವಿಸರ್ಜಿಸುವ ಸಮಯದಲ್ಲಿ ವಿವಿಧ ನೀರಿನ ಮೂಲಗಳಲ್ಲಿ ಕಡಿಮೆ ಪ್ರತಿಕೂಲ ಪ್ರಭಾವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು/ಮಾರ್ಗದರ್ಶನ ನೀಡಬೇಕು.

5. ಕೆರೆ ಹಾಗೂ ಬಾವಿಗಳಲ್ಲಿ ಮೂರ್ತಿಗಳನ್ನು ವಿಸರ್ಜಿಸುವಾಗ ತಾತ್ಕಾಲಿಕ ಹೊಂಡ ಮತ್ತು ತೊಟ್ಟಿಗಳನ್ನು ನಿರ್ಮಿಸಿ ಮೂರ್ತಿಗಳನ್ನು ಹಾಗೂ ಮೂರ್ತಿಗಳಿಗೆ ಉಪಯೋಗಿಸಿದ ಪೂಜಾ ಸಾಮಗ್ರಿಗಳನ್ನು ಈ ತಾತ್ಕಾಲಿಕ ಹೊಂಡಗಳಲ್ಲಿ ವಿಸರ್ಜನೆ ಮಾಡಬೇಕು. ಈ ವಿಸರ್ಜನೆ ಕಾರ್ಯ ಪೂರ್ತಿ ಮುಕ್ತಾಯವಾದ ಮೇಲೆ ಈ ತಿಳಿಯಾದ ಕೆರೆ ನೀರು ಮತ್ತು ಹೊಂಡದ ನೀರನ್ನು ನದಿ/ಹೊಂಡ/ಕೆರೆಗಳಲ್ಲಿ ಅದರ ಬಣ್ಣ ಮತ್ತು ಗಡುಸನ್ನು ಪರೀಕ್ಷೆ ಮಾಡಿ ವಿಸರ್ಜಿಸಬಹುದು ಹಾಗೂ ಅವಶ್ಯವಿದ್ದರೆ ಹೊಂಡದ ನೀರನ್ನು ಸರಿಯಾದ ರೀತಿಯಲ್ಲಿ ಶುದ್ಧೀಕರಿಸಿದ ನಂತರ ವಿಸರ್ಜನೆ ಮಾಡಬಹುದು.

6. ವಿಸರ್ಜಿಸುವುದಕ್ಕಿಂತ ಮುಂಚೆ ಮೂರ್ತಿಗಳಿಗೆ ಪೂಜೆ ಮಾಡಲು ಉಪಯೋಗಿಸಿದ ಹೂವು, ವಸ್ತ್ರ, ಅಲಂಕಾರ ಸಾಮಗ್ರಿಗಳನ್ನು (ಪೇಪರ್ ಮತ್ತು ಪ್ಲಾಸ್ಟಿಕ್‌ನಲ್ಲಿ ಮಾಡಿದಂತಹ) ತೆಗೆದಿಡಬೇಕು. ಇಂತಹ ಸಾಮಗ್ರಿಗಳನ್ನು ಪ್ರತ್ಯೇಕವಾಗಿ ಕೂಡಿಹಾಕಿ ಜೈವಿಕವಿಘಟನೆವಾಗುವ ಪದಾರ್ಥಗಳನ್ನು ಮರು ಬಳಕೆ ಮತ್ತು ಗೊಬ್ಬರ ತಯಾರಿಕೆಗೆ ಹಾಗೂ ಇತರೆ ಜೈವಿಕವಿಘಟನೆಯಾಗದ ಪದಾರ್ಥಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಬೇಕಾಗಿರುತ್ತದೆ.

7. ಮೂರ್ತಿಗಳ ವಿಸರ್ಜನೆಯಾದ 24 ಗಂಟೆಗಳ ಒಳಗೆ (ಕೆರೆ, ಬಾವಿ,ಹೊಂಡಗಳು ನದಿಗಳ ಹತ್ತಿರ) ಬಿಟ್ಟು ಹೋದ ಸಾಮಗ್ರಿಗಳನ್ನು ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು.

8. ಮೂರ್ತಿ ವಿಸರ್ಜಿಸುವ ಸ್ಥಳಗಳಲ್ಲಿ ಘನತ್ಯಾಜ್ಯ ವಸ್ತುಗಳನ್ನು ಸುಡುವುದಕ್ಕೆ ಸ್ಥಳೀಯ ಸಂಸ್ಥೆಗಳು ಅವಕಾಶ ನೀಡಬಾರದು.

9. ಸಾರ್ವಜನಿಕರಿಗೆ ಚಿಕ್ಕದಾದ ಮೂರ್ತಿಗಳನ್ನು ಪೂಜಿಸಲು/ಉಪಯೋಗಿಸಲು ಪ್ರೋತ್ಸಾಹಿಸಬೇಕು.

10. ವಿಸರ್ಜನೆಯ ಸಮಯದಲ್ಲಿ ಜಲ ಸಂಗ್ರಹಕ್ಕೆ ಆಗುವ ದುಷ್ಪರಿಣಾಮದ ಬಗ್ಗೆ ಮಾಧ್ಯಮಗಳಲ್ಲಿ ಸಾರ್ವಜನಿಕರಿಗೆ ಇದರ ಬಗ್ಗೆ ತಿಳುವಳಿಕೆ ನೀಡಬೇಕು ಮತ್ತು "ಕರ ಸೇವೆಗೆ" ಪ್ರೋತ್ಸಾಹಿಸಿ ಇದರಿಂದಾಗುವ ಪ್ರತಿಕೂಲ ಪ್ರಭಾವವನ್ನು ಕಡಿಮೆ ಗೊಳಿಸಬೇಕು.

11. ಹಬ್ಬದ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳು ಸಂಚಾರಿ ವಿಸರ್ಜಿಸುವ ತೊಟ್ಟಿಗಳನ್ನು ನಿರ್ದಿಷ್ಟವಾದ ಸ್ಥಳಗಳಲ್ಲಿ ನಿಲುಗಡೆ ವ್ಯವಸ್ಥೆಯನ್ನು ಮಾಡಬೇಕು ಮತ್ತು ಈ ನಿರ್ದಿಷ್ಟವಾದ ಸ್ಥಳಗಳ ಬಗ್ಗೆ ವಿವಿಧ ಮಾಧ್ಯಮದ ಮೂಲಕ ಪ್ರಚಾರವನ್ನು ಮಾಡಬೇಕು.

ನೀರು: ಜೀವಕ್ಕೆ ಒಂದು ಅತ್ಯಮೂಲ್ಯವಾದ ಸಂಪನ್ಮೂಲ

ಇದನ್ನು ಉಳಿಸಿ ಮತ್ತು ಸಂರಕ್ಷಿಸಿ

ಇರುವುದೊಂದೆ ಭೂಮಿಯನ್ನು ಸಹಭಾಗಿಯಾಗಿ ರಕ್ಷಿಸಿ